†ಆಲೂರು ಹನುಮಂತಪ್ಪ.—ಇದು ದೊಡ್ಡ ಕೆರೆ, 950 ಎಕರೆಗಳಿದೆ. ಇದಕ್ಕೆ ಸಿಲ್ಟ್ ಬರುತ್ತಿದೆ ಮತ್ತು ಉಪ್ಪು ನೀರಿನ ಪ್ರವಾಹದಿಂದ ಈ ಕೆರೆ ಮುಚ್ಚಿ ಹೋಗುತ್ತದೆ ಎನ್ನುವ ಅಭಿಪ್ರಾಯ ಸೂಕ್ತವಾದುದು.

ಶ್ರೀ ಕೆ. ಎಂ. ತಮ್ಮಯ್ಯ.—ಈ ಕೆರೆ ಅಗಲವಾಗುತ್ತಿರುವುದರಿಂದ ಸಾವಿರಾರು ತೆಂಗಿನ ಮರಗಳು ಕೂಡ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಆ ಪ್ರದೇಶದ ರೈತರು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದ್ದಾರೆ ಸ್ವಾಮಿ.

ಶ್ರೀ ಕೆ. ಎಂ. ತಮ್ಮಯ್ಯ.—ಈ ಕೆರೆಯಿಂದ ಎರಡು ಮೂರು ಸಾವಿರ ಎಕರೆ ನೀರಾವರಿಯಾಗುವುದರಿಂದ ಆದಷ್ಟು ಬೇಗನೆ ದುರಸ್ತು ಮಾಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಈ ಕೆರೆಗೆ ಉಪ್ಪು ನೀರಿನ ಪ್ರವಾಹ ಬರುವುದನ್ನು ತಡೆಗಟ್ಟಲು ಒಂದು ಯೋಜನೆ ಈಗ ಸರ್ವೆ ಆಗ್ಗುತ್ತಿದೆ. ಸರ್ವೆ ಕೆಲಸವಾದ ಮೇಲೆ ಏನು ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ.

Deposit of amount by Private Institutions for opening New Colleges.

*Q.—491. Sri SIDDAIAH KASHIMATH (Shirahatti).—

Will the Minister for Education be pleased to state :—

(*a*) the amount to be deposited by the Private Institutions while opening a new college in the state ;

(*b*) whether Government would order to fix an uniform deposit amount for all the private institutions in the State ?

A.—Sri K. V. SHANKARA GOWDA (Minister for Education).—

a) *Vide* Annexure placed on the Table of the House**

(*b*) Conditions for affiliation are normally decided on the advice of the Universities. It is not considered feasible to have uniform rules.

ಶ್ರೀ ಸಿದ್ದಯ್ಯ ಕಾಶೀಮಠ.—ಮೈಸೂರು ಯೂನಿವರ್ಸಿಟಿಯವರು ಒಂದು ಕಾಲೇಜನ್ನು ಪ್ರಾರಂಭ ಮಾಡಬೇಕಾದರೆ 2 ಲಕ್ಷ, 5 ಲಕ್ಷ ಠೇವಣಿ ಕೇಳುತ್ತಾರೆ. ಹಾಗೆಯೇ ಕರ್ನಾಟಕ ಯೂನಿವರ್ಸಿಟಿಯವರು 1 ಲಕ್ಷದಿಂದ 3 ಲಕ್ಷದವರೆಗೆ ನಿಗದಿ ಮಾಡಿದ್ದಾರೆ. ಕೊನೆಯಪಕ್ಷ ತಾಲ್ಲೂಕು ಬೋರ್ಡ್‌ನವರು ಮತ್ತು ಮುನಿಸಿಪಾಲಿಟಿಯವರು ನಡೆಸತಕ್ಕ ಕಾಲೇಜುಗಳಿಗೆ ಏನಾದರೂ ಏನಾಯಿತಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರ ಗೌಡ.—ಇದು ಆಯಾಯ ವಿಶ್ವವಿದ್ಯಾನಿಲಯದವರು ಪರಿಶೀಲನೆ ಮಾಡಬೇಕಾದಂಥ ಪ್ರಶ್ನೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಮೈಸೂರು ಯೂನಿವರ್ಸಿಟಿಯವರು ಕರ್ನಾಟಕ ಯೂನಿವರ್ಸಿಟಿಯವರು ತುಂಬಾ ಠೇವಣಿ ಕೇಳುತ್ತಾರೆ. ಆದರೆ ಬೆಂಗಳೂರು ಯೂನಿವರ್ಸಿಟಿಯವರು ಮಾದರಿಯಾಗಿ ಅಫಿಲಿಯೇಷನ್ ಮಾಡುವಾಗ 750 ರಿಂದ 1,000 ರೂಪಾಯಿಯವರೆಗೆ ಕೇಳುತ್ತಾರೆ. ಬೆಂಗಳೂರು ಯೂನಿವರ್ಸಿಟಿಯವರು ಮಾಡಿರತಕ್ಕ ಈ ನಿಯಮವನ್ನು ಕರ್ನಾಟಕ ಮತ್ತು ಮೈಸೂರು ಯೂನಿವರ್ಸಿಟಿಯವರು ಅನುಸರಿಸಬೇಕೆಂದು ಆದೇಶ ನೀಡುತ್ತೀರಾ ?

**Copies placed in the Mysore Legislature Library. *Vide* No. 18, dated 13-7-1967.

ಶ್ರೀ ಕೆ. ಎ. ಶಂಕರ ಗೌಡ —ಅವು ಸ್ವಯಂ ಆಡಳಿತ ಸಂಸ್ಥೆಗಳು. ಆದ್ದರಿಂದ ಅವುಗಳಿಗೆ ಆದೇಶ ನೀಡುವುದಕ್ಕೆ ಬರುವುದಿಲ್ಲ. ಎರಡೂ ವಿಶ್ವವಿದ್ಯಾನಿಲಯಗಳೂ ಬೆಂಗಳೂರು ವಿಶ್ವವಿದ್ಯಾನಿಲಯದ ರೀತಿ ಇರಬೇಕು ಎಂದು ಕಡ್ಡಾಯವಿಲ್ಲ. ಯಾವಾವ ವಿಶ್ವವಿದ್ಯಾನಿಲಯದ ಪರಿಸ್ಥಿತಿ ಗನುಗುಣವಾಗಿ ಅವರು ಮೊಬಲಗನ್ನು ನಿರ್ಧಾರ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಕೆಲವು ಖಾಸಗೀ ವಿದ್ಯಾಸಂಸ್ಥೆಗಳು ಸರ್ಕಾರದಿಂದ ಸಹಾಯ ಧನವನ್ನು ತೆಗೆದುಕೊಂಡು ವಿದ್ಯಾರ್ಥಿಗಳು ಕುಳಿತುಕೊಳ್ಳುವುದಕ್ಕೂ ಸ್ಥಳ ಇಲ್ಲದೆ ವ್ಯಾಪಾರಿ ಸಂಸ್ಥೆಗಳಾಗಿವೆ. ತಾವು ಅವನ್ನು ರದ್ದು ಮಾಡಿ ರಾಷ್ಟ್ರೀಕರಣ ಮಾಡಿ ಅವುಗಳನ್ನು ನಡೆಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Mr. SPEAKER.—How does it arise? The question relates to deposit to be made by private institutions for opening new colleges.

Sri M. A. AMALORPAVAM.—Has the Government any proposal to start colleges in the near future in Civil Station, Bangalore?

Mr. SPEAKER.—That does not arise.

ಶ್ರೀ ಎಸ್. ಎಂ. ಗುರೆಡ್ಡಿ.—ಪ್ರತಿವರ್ಷ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಾ ಇದ್ದು ಉತ್ತರ ಕರ್ನಾಟಕದಲ್ಲಿ ಕಾಲೇಜುಗಳನ್ನು ತೆರೆಯುವುದು ಬಹಳ ಅವಶ್ಯ ಇರುವುದರಿಂದ ಡಿಪಾಸಿಟ್ ಹೆಚ್ಚಾಗಿರುವುದರಿಂದ ಅದನ್ನು ಕಡಿಮೆ ಮಾಡುವುದಕ್ಕೆ ಕರ್ನಾಟಕ ಯೂನಿವರ್ಸಿಟಿಗೆ ತಿಳಿಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎ. ಶಂಕರ ಗೌಡ.—ಮೊದಲೇ ಅದಕ್ಕೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಇಂಜನೀಯರಿಂಗ್ ಕಾಲೇಜುಗಳಿಗೆ ಮತ್ತು ಮೆಡಿಕಲ್ ಕಾಲೇಜುಗಳಿಗೆ ಹೆಚ್ಚಾಗಿ ವಿದ್ಯಾರ್ಥಿಗಳು ಬರುತ್ತಾ ಇರುವುದರಿಂದ ಖಾಸಗಿ ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಸ್ಥಾಪನೆ ಮಾಡಬೇಕಾದರೆ 10 ಲಕ್ಷ ರೂಪಾಯಿ ಡಿಪಾಜಿಟ್ ಗಳನ್ನು ಇಡಬೇಕಾಗುತ್ತದೆ. ಇದು ಜಾಸ್ತಿ ಆಗುತ್ತಾ ಇರುವುದರಿಂದ ಮತ್ತು ಹುಡುಗರಿಗೆ ತೊಂದರೆಯನ್ನು ತಪ್ಪಿಸುವ ದೃಷ್ಟಿಯಿಂದ ಸರ್ಕಾರದವತೇ ಸೆಕ್ಯೂರಿಟಿ ಹಣ ಕೊಟ್ಟು ಈ ಕಾಲೇಜುಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎ. ಶಂಕರ ಗೌಡ.—ಮುಂದೆ ಯಾವ ಇಂಜನಿಯರಿಂಗ್ ಕಾಲೇಜು ಸ್ಥಾಪನೆ ಮಾಡುವುದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಈಗಲೇ ಇಂಜಿನಿಯರಿಂಗ್ ಕಾಲೇಜು ಬಹಳ ಇವೆ. ಆದ್ದರಿಂದ ಮುಂದೆ ಇಂಜನಿಯರಿಂಗ್ ಕಾಲೇಜು ಸ್ಥಾಪನೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಬೇರೆ ಬೇರೆ ಯೂನಿವರ್ಸಿಟಿಗಳು ಅಲ್ಲಯ ಪರಿಸ್ಥಿತಿಗೆ ಅನುಸರಿಸಿ ಶೇವಣಿ ಗೊತ್ತು ಮಾಡಿದ್ದಾರೆ. ಎಂದು ಹೇಳಿದ್ದೀರಿ. ಬೇರೆ ಬೇರೆ ಯೂನಿವರ್ಸಿಟಿ ಗಳಲ್ಲಿರುವ ವ್ಯತ್ಯಾಸ ಏನು ? ಏಕರೂಪತೆಯ ಶೇವಣಿಯನ್ನು ಎರಡೂ ವಿಶ್ವವಿದ್ಯಾನಿಲಯಗಳಲ್ಲೂ ಇಡುವುದಕ್ಕೆ ಸರ್ಕಾರ ವರ್ಚಸ್ಸನ್ನು ಉಪಯೋಗ ಮಾಡುವುದಕ್ಕೆ ಅವಕಾಶ ಇಲ್ಲವೇ ?

ಶ್ರೀ ಕೆ. ಎ. ಶಂಕರ ಗೌಡ.—ಸ್ವಯಂ ಆಡಳಿತ ಅಧಿಕಾರ ಕೊಟ್ಟಮೇಲೆ ಪದೇ ಪದೇ ಅವರ ಕಾರ್ಯಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡುವುದು ಕಷ್ಟವಾಗುತ್ತದೆ.

Mr. SPEAKER.—Question Hour is over. Now Sri S. R. Bommai has tabled short notice Question No. 65 but he is not here. On his behalf Sri F. S. Patil is permitted to put the question.